ಶ್ರೀ ಕೆ. ಹೆಚ್. ಪಾಟೀಲ್ (ಕಂದಾಯ ಮಂತ್ರಿಗಳು).—

ಅ) ಇದೆ

ಆ) ಬಗರ್‌ಹುಕುಂ ಸಾಗುವಳಿಗಳನ್ನು ಸಕ್ರಮಗೊಳಿಸಲು ಪ್ರಸ್ತುತ ಕಾನೂನಿನಲ್ಲಿ ಅವಕಾಶ ವಿರುವುದಿಲ್ಲ. ಆದುದರಿಂದ ಕರ್ನಾಟಕ ಭೂ ಕಂದಾಯ ಕಾಯಿದೆ ೧೯೬೪ರ ಕಲಂ ೯೪ಕ್ಕೆ ಸೂಕ್ತ ತಿದ್ದುಪಡಿಯನ್ನು ಮಾಡಿ ಬಗರ್‌ಹುಕುಂ ಸಾಗುವಳಿಗಳನ್ನು ಸೂಕ್ತ ರೀತಿಯಲ್ಲಿ ಸಕ್ರಮಗೊಳಿಸುವ ಪ್ರಶ್ನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ.

ಶ್ರೀ ಬಿ.ಎಸ್. ಯಡಿಯೂರಪ್ಪ.—ಮಾನ್ಯ ಅಧ್ಯಕ್ಷರೆ ಈ ಪ್ರಶ್ನೆ ಮೂರೂವರೆ ಲಕ್ಷ ಬಡ ಜನರಿಗೆ ಸಂಬಂಧಪಟ್ಟದ್ದು. ಭೂ ಕಂದಾಯ ಕಾಯಿದೆಗೆ ತಿದ್ದುಪಡಿಯನ್ನು ಈ ಅಧಿವೇಶನದಲ್ಲಿಯೇ ತರುತ್ತೀರಾ ? ತರುವುದಿದ್ದರೆ ಯಾವಾಗ ತರುತ್ತೀರೆಂಬುದನ್ನು ಸ್ಪಷ್ಟವಾಗಿ ಹೇಳಿ. ಮತ್ತೆ ಈ ತಿದ್ದುಪಡಿಯಲ್ಲಿ ಎಸ್‌ಸಿ ಎಸ್‌ಟಿ ಜನರಿಗೆ ಅಲ್ಲದೇ ಮಿಕ್ಕವರು ಬಡವರು ಯಾರು ಸಾಗುವಳಿ ಮಾಡುತ್ತಿದ್ದಾರೆ, ಅವರಿಗೆ ಸಹ ಸಕ್ರಮ ಮಾಡುವ ಬಗ್ಗೆಯೂ ತಿದ್ದುಪಡಿ ತರುತ್ತೀರಾ ? ಈ ತಿದ್ದುಪಡಿಯಿಂದಾಗಿ ಎಷ್ಟು ಜನರಿಗೆ ಅನುಕೂಲವಾಗುತ್ತದೆ?

ಶ್ರೀ ಎಂ ವೀರಪ್ಪಮೊಯ್ಲಿ.— ಈ ರಾಜ್ಯದಲ್ಲಿ ಸುಮಾರು ೩ಲಕ್ಷ೭೫ ಸಾವಿರ ಜನರು ಸರ್ಕಾರಕ್ಕೆ ಸೇರಿದ ೭ಲಕ್ಷ೧೦ಸಾವಿರದ ೭೫೯ಎಕರೆ ೧೪ ಗುಂಟೆ ಜಮೀನನ್ನು ಅನಧಿಕೃತವಾಗಿ ಸಾಗುವಳಿ ಮಾಡುತ್ತಿದ್ದಾರೆ ಅದರ ಎಲ್ಲಾ ವಿವರ ನನ್ನ ಹತ್ತಿರ ಇದೆ ಅದನ್ನು ನಾವು ಐಡೆಂಟಿಫೈ ಮಾಡಿದ್ದೇವೆ. ತಮಗೆ ಗೊತ್ತಿರುವ ಹಾಗೆ ಈ ಬಗ್ಗೆ ಹಿಂದೆ ಕೂಡಾ ಒಂದು ಮಸೂದೆ ಇಲ್ಲಿ ಬಂದಿತ್ತು. ಅದು ಲ್ಯಾಪ್ಸ್ ಆಗಿದೆ ಇದರಲ್ಲಿ ಯಾರು ಅರ್ಹರಿದ್ದಾರೆ, ಯಾರಿಗೆ ಭೂಮಿ ಕೊಡಬೇಕು, ಎಷ್ಟು ವಿಸ್ತೀರ್ಣ ಕೊಡಬೇಕು ಎನ್ನುವ ಬಗ್ಗೆ ನಾವು ಈಗಾಗಲೇ ಕರಡು ಮಸೂದೆಯನ್ನು ತಯಾರು ಮಾಡಿ ಅದನ್ನು ಫೈನಲ್ ಮಾಡುತ್ತಿದ್ದೇವೆ ಸಾಧ್ಯವಾದರೆ ಈ ಸದನದಲ್ಲೇ, ಈ ಅಧಿವೇಶನದಲ್ಲೇ ತರಬೇಕೆನ್ನುವ ಉದ್ದೇಶ ಸರ್ಕಾರಕ್ಕೆ ಇದೆ. ನಾನು ವಿವರ ಕೊಟ್ಟಿದ್ದೇನೆ. ಆದರೆ ಇವರೆಲ್ಲಾ ಎಲಿಜಿಬಲ್ ಎಂದು ಹೇಳಲು ವುದಕ್ಕಾಗುವುದಿಲ್ಲ.

ಶ್ರೀ ಬಿ. ಎಸ್.ಯಡಿಯೂರಪ್ಪ.—ಎಸ್‌ಸಿಎಸ್‌ಟಿ ಅಲ್ಲದ ಕಡುಬಡವರು ಯಾರು ಸಾಗುವಳಿ ಮಾಡುತ್ತಿದ್ದಾರೆ ಅವರಿಗೂ ಹಂಚಲು ಕಾರ್ಯಕ್ರಮ ಹಾಕಿಕೊಳ್ಳುತ್ತೀರಾ?

ಶ್ರೀ ಎಂ ವೀರಪ್ಪಮೊಯಿಲಿ.—ನಾನು ಹೇಳಿದ ೩ಲಕ್ಷ ೭೫ ಸಾವಿರ ಜನರೆಲ್ಲಾ ಎಸ್‌ಸಿಎಸ್‌ಟಿಗಳಲ್ಲ. ಇದರಲ್ಲಿ ೧ ಲಕ್ಷ ೯ಸಾವಿರದ ೨೩೭ ಮಂದಿ ಎಸ್‌ಸಿಎಸ್‌ಟಿಗಳಿದ್ದು, ಇವರುಗಳು ೨ ಲಕ್ಷದ ೭ ಸಾವಿರದ ೧೬೮ ಎಕರೆ ೩೫ ಗುಂಟೆ ಜಮೀನನ್ನು ಸಾಗುವಳಿ ಮಾಡುತ್ತಿದ್ದಾರೆ. ಉಳಿದವರು ಬೇರೆ ವರ್ಗಕ್ಕೆ ಸೇರಿದವರು.

ಶ್ರೀ ಬಿ. ಎಸ್. ಯಡಿಯೂರಪ್ಪ.—ಉಳಿದವರ ಬಗ್ಗೆಯೂ ತಿದ್ದುಪಡಿ ತರುತ್ತೀರಾ ?

ಶ್ರೀ ಎಂ. ವೀರಪ್ಪ ಮೊಯಿಲಿ.—ಎಲ್ಲರಿಗೂ ಕಂಬಂಧಪಟ್ಟಹಾಗೆ ಮಸೂದೆ ತರುತ್ತೇವೆ. ಬರೀ ಎಸ್‌ಸಿಎಸ್‌ಟಿಯವರಿಗೆ ಮಾತ್ರ ಅಲ್ಲ.

ಅಧ್ಯಕ್ಷರು.—ಈಗ ಪ್ರಶ್ನೋತ್ತರ ವೇಳೆ ಮುಗಿಯಿತು, ಈಗ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಪಟ್ಟಿಯನ್ನು ಸಭೆಯ ಮುಂದೆ ಮಂಡಿಸುವುದು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎಂ. ವೀರಪ್ಪ ಮೊಯ್ಲಿ.—ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸುವ ಪ್ರಶ್ನೋತ್ತರಗಳ ಏಳನೇ ಪಟ್ಟಿಯನ್ನು ಸಭೆಯ ಮುಂದಿಡುತ್ತೇನೆ.

ರಾಜ್ಯದ ಹೈಕೋರ್ಟ್ ಪೀಠಗಳನ್ನು ಹುಬ್ಬಳ್ಳಿ ಹಾಗೂ ಗುಲ್ಬರ್ಗಾಗಳಲ್ಲಿ ಸ್ಥಾಪಿಸುವ ಬಗ್ಗೆ

೩೬ ಶ್ರೀ ಎಲ್ ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದ ಹೈಕೋರ್ಟ್ ಪೀಠಗಳನ್ನು ಹುಬ್ಬಳ್ಳಿ, ಗುಲ್ಬರ್ಗಾಗಳಲ್ಲಿ ಸ್ಥಾಪಿಸುವ ವಿಚಾರವು ಸರ್ಕಾರದ ಮುಂದಿದೆಯೇ ?

ಆ) ಹಾಗಿದ್ದಲ್ಲಿ, ಮೇಲ್ಕಂಡ ಹೈಕೋರ್ಟ್ ಪೀಠಗಳ ಸ್ಥಾಪನೆಗಾಗಿ ಕೈಗೊಂಡ ಕ್ರಮಗಳೇನು ?

ಶ್ರೀ ವೀರೇಂದ್ರ ಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ಹುಬ್ಬಳ್ಳಿ–ಧಾರವಾಡದಲ್ಲಿ ರಾಜ್ಯದ ಹೈಕೋರ್ಟಿನ ಪೀಠವನ್ನು ಸ್ಥಾಪಿಸುವ ವಿಚಾರವು ಸರ್ಕಾರದ ಮುಂದಿದೆ, ಗುಲ್ಬರ್ಗಾದಲ್ಲಿ ಅಂತಹ ಪೀಠವನ್ನು ಸ್ಥಾಪಿಸುವ ವಿಚಾರ ಸರ್ಕಾರದ ಮುಂದೆ ಇಲ್ಲ.

ಆ) ಹೈಕೋರ್ಟಿನ ಪೀಠವೊಂದನ್ನು ಹುಬ್ಬಳ್ಳಿ–ಧಾರವಾಡದಲ್ಲಿ ಸ್ಥಾಪಿಸುವ ವಿಚಾರವನ್ನು ಕರ್ನಾಟಕ ಹೈಕೋರ್ಟಿನೊಂದಿಗೆ ಸಮಾಲೋಚಿಸಿ ಪರಿಶೀಲಿಸಲಾಗುತ್ತಿದೆ.

ರಾಜ್ಯದಲ್ಲಿರುವ ಐ.ಪಿ.ಎಸ್. ಅಧಿಕಾರಿಗಳ ಬಗ್ಗೆ

೧೩೨. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಮುಖ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ಐ. ಪಿ. ಎಸ್. (ಭಾರತೀಯ ಪೋಲೀಸ್ ಸೇವೆ) ಅಧಿಕಾರಿಗಳ ಸಂಖ್ಯೆ ಎಷ್ಟು ?

ಆ) ಮೇಲ್ಕಂಡ ಅಧಿಕಾರಿಗಳಲ್ಲಿ ನೇರ ನೇಮಕ ಹಾಗೂ ಇಲಾಖಾ ಬಡ್ತಿಯನ್ವಯ ಐ.ಪಿ.ಎಸ್. ಪಡೆದವರ ಸಂಖ್ಯೆ ಎಷ್ಟು ?

ಇ) ಮೇಲ್ಕಂಡ ಅಧಿಕಾರಿಗಳಲ್ಲಿ ಪ್ರಸ್ತುತ ಎಕ್ಸಿಕ್ಯೂಟೀವ್ ಹಾಗೂ ನಾನ್–ಎಕ್ಸಿಕ್ಯೂಟೀವ್ ಹುದ್ದೆಗಳಲ್ಲಿ ಕೆಲಸ ಮಾಡುತ್ತಿರುವವರ ಸಂಖ್ಯೆ ಎಷ್ಟು ?

ಈ) ಈ ಅಧಿಕಾರಿಗಳಲ್ಲಿ ಕೇಂದ್ರ ಸರ್ಕಾರದ ಎರವಲು ಸೇವೆಯಲ್ಲಿರುವವರ ಹಾಗೂ ಸಸ್ಪೆಂಡ್ ಆಗಿರುವ ಅಧಿಕಾರಿಗಳ ವಿವರಗಳನ್ನು ಒದಗಿಸುವುದು ?

ಶ್ರೀ ವೀರೇಂದ್ರಪಾಟೀಲ್ (ಮುಖ್ಯ ಮಂತ್ರಿಗಳು).—

ಅ) ೧೦೯

ಆ) ೧. ನೇರ ನೇಮಕ ... ೮೧

೨. ಇಲಾಖಾ ಬಡ್ತಿ ... ೨೮

ಇ) ೧. ಎಕ್ಸಿಕ್ಯೂಟೀವ್ ... ೪೮

೨. ನಾನ್ ಎಕ್ಸಿಕ್ಯೂಟೀವ್ ... ೬೧

ಈ) ಕೇಂದ್ರ ಸರ್ಕಾರದ ಎರವಲು ಸೇವೆ—೨೨

ಇಬ್ಬರು ಐ.ಪಿ.ಎಸ್. ಅಧಿಕಾರಿಗಳಾದ ಶ್ರೀ ಕೆ. ನಾರಾಯಣ್ ಹಾಗೂ ಶ್ರೀ ಎನ್. ಅಚ್ಚುತ್‌ರಾವ್ ಅವರನ್ನು ಅಮಾನತ್ತಿನಲ್ಲಿಡಲಾಗಿದೆ.

ರಾಜ್ಯದಲ್ಲಿರುವ ಸಹಕಾರ ಸಕ್ಕರೆ ಕಾರ್ಖಾನೆಗಳ ಬಗ್ಗೆ

೧೩೩. ಶ್ರೀ ಎಲ್. ಆರ್. ಶಿವರಾಮೇಗೌಡ (ನಾಗಮಂಗಲ).—ಮಾನ್ಯ ಸಹಕಾರ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿರುವ ವಿವಿಧ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ರಾಜ್ಯ ಸರ್ಕಾರ ರಾಜ್ಯ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳು, ರಾಜ್ಯ ಸರ್ಕಾರದ ಜಾಮೀನಿನಿಂದ ಪಡೆದು ತೊಡಗಿಸಿದ ಬಂಡವಾಳಗಳ ವಿವರಗಳು ಏನು?

ಆ) ಈ ಸಹಕಾರ ಸಕ್ಕರೆ ಕಾರ್ಖಾನೆಗಳ ವೈಕಿ ಲಾಭದಲ್ಲಿ ನಡೆಯುತ್ತಿರುವ ಕಾರ್ಖಾನೆಗಳ ಸಂಖ್ಯೆ ಎಷ್ಟು ?

ಇ) ಮೇಲ್ಕಂಡ ಕಾರ್ಖಾನೆಗಳನ್ನು ಖಾಸಗಿಯವರಿಗೆ ವಹಿಸುವ ಉದ್ದೇಶ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ಆರ್. ರಾಜು (ಸಹಕಾರ ಮಂತ್ರಿಗಳು).—

ಅ) ರಾಜ್ಯದಲ್ಲಿರುವ ವಿವಿಧ ಸಹಕಾರಿ ಸಕ್ಕರೆ ಕಾರ್ಖಾನೆಗಳಲ್ಲಿ ರಾಜ್ಯ ಸರ್ಕಾರವು ದಿನಾಂಕ ೩೧-೫-೧೯೮೫ಕ್ಕೆ ಒಟ್ಟು ೨,೯೪೪.೮೭ ಲಕ್ಷದ ಶೇರು ಬಂಡವಾಳವಾಗಿಯೂ ಮತ್ತು ರೂಪಾಯಿ ೧,೧೧೭.೩೧ ಲಕ್ಷವನ್ನು ಸಾಲದ ರೂಪದಲ್ಲಿ ತೊಡಗಿಸಿವೆ.